Share Report Abuse Next Blog» Create Blog Sign In

# mouna kanive

THURSDAY, AUGUST 26, 2010

## ’ಸ್ಮೃತಿ ವಿಸ್ಮೃತಿ; ಭಾರತೀಯ ಸಂಸ್ಕೃತಿ’- ವಿಭಿನ್ನ ಚಿಂತನೆಯ ಕೃತಿ



ಭಾನುವಾರ, ಆಗಸ್ಟ್ ೨೯ರಂದು ಬೆಳಿಗ್ಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎಸ್.ಎನ್. ಬಾಲಗಂಗಾಧರ ರಾವ್ ಅವರ "ಹೀದನ್ ಇನ್ ಹಿಸ್ ಬ್ಲೈಂಡ್ನೆಸ್" ಕೃತಿಯ ಕನ್ನಡಾನುವಾದ "ಸ್ಮೃತಿ ವಿಸ್ಮೃತಿ; ಭಾರತೀಯ ಸಂಸ್ಕೃತಿ" ಬಿಡುಗಡೆಯಾಗಲಿದೆ.

ಕನ್ನಡಿಗರಾದ ಬಾಲಗಂಗಾಧರನಾಥರು ಕಳೆದ ಮೂರು ದಶಕಗಳಿಂದ ಬೆಲ್ಜಿಯಂನ ಗೆಂಟ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನ ವಿಭಾಗದ ನಿರ್ದೇಶಕರಾಗಿದ್ದಾರೆ. ವಿಭಿನ್ನ ಮಾನವ ಸಂಸ್ಕೃತಿಗಳ ಕುರಿತು ಪರ್ಯಾಯವಾದ ದೃಷ್ಟಿಕೋನವೊಂದು ಬೆಳೆಸುವ ನಿಟ್ಟಿನಲ್ಲಿ ಅವರು ಸಂಶೋಧನೆಯನ್ನು ಕೈಗೊಂಡಿದ್ದಾರೆ. ಅದರ ಫಲಶ್ರುತಿಯಾಗಿ ಈ ಪುಸ್ತಕ ಹೊರಬಂದಿದೆ.

ಪಾಶ್ಚಾತ್ಯ ಸಂಸ್ಕೃತಿ ಚಿಂತಕರ ಪ್ರಕಾರ, ಎಲ್ಲಾ ಸಂಸ್ಕೃತಿಗಳು ಒಂದಿಲ್ಲೊಂದು ಪ್ರಕಾರದ ರಿಲೀಜನ್ ಅನ್ನು ಹೊಂದಿರುತ್ತವೆ; ರಿಲೀಜನ್ ಗಳು ಇಲ್ಲದ ಸಂಸ್ಕೃತಿಗಳೇ ಇಲ್ಲ.ಆದರೆ ಬಾಲಗಂಗಾಧರನಾಥರು ಪಾಶ್ಚ್ಯಾತ್ಯರ ಗ್ರಹಿಕೆಯನ್ನು ಅಲ್ಲಗೆಳೆಯುತ್ತಾ’ ರಿಲೀಜನ್ ಸಾಂಸ್ಕೃತಿಕ ಸಾರ್ವತಿಕವಲ್ಲ’ ಎಂದು ವಾದಿಸುತ್ತಾರೆ. ಅವರ ವಾದವು ಮುಂದುವರೆದು ಹೇಗೆ ಕ್ರಿಶ್ಚಿಯನ್ ಥಿಯಾಲಜಿಯು ಎಲ್ಲಾ ಸಂಸ್ಕೃತಿಗಳು ಒಂದಿಲ್ಲೊಂದು ಪ್ರಕಾರದ ರಿಲೀಜನ್ನುಗಳನ್ನು ಹೊಂದಿದೆ ಎಂದು ಪಾಶ್ಚಿಮಾತ್ಯಾರು ಗ್ರಹಿಸಿಕೊಳ್ಳುವಂತೆ ಹಾಗು ಅದರಿಂದುಂಟಾದ ಪರಿಣಾಮಗಳೇನು? ಎಂಬ ಪ್ರಶ್ನೆಯ ಕುರಿತು ತೀರಾ ತರ್ಕಬದ್ಧವಾಗಿ, ಹಾಗು ವಿವರಣಾತ್ಮಕವಾಗಿ ಚರ್ಚಿಸಿದ್ದಾರೆ. ಭಾರತದ ಇಂದಿನ ಸಂದರ್ಭದಲ್ಲಿ ಕೂಡ ಹಲವಾರು ಬಗೆ ಹರಿಯದ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಲು ಈ ಪುಸ್ತಕ ನೆರವಾಗುತ್ತದೆ.

೫೭೨ ಪುಟಗಳ ಈ ಪುಸ್ತಕದಲ್ಲಿ ಒಟ್ಟು ನಾಲ್ಕು ಭಾಗಗಳಿವೆ; ೧೨ ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ರಿಲಿಜನ್ನಿನ ವಿದ್ವಾಂಸರಲ್ಲಿ ಇರುವ ಅಸಂಗತತೆಯನ್ನು ಲೇಖಕರು ಎತ್ತಿ ತೋರಿಸುತ್ತಾರೆ.
೨,೩,೪ನೇ ಅಧ್ಯಾಯಗಳು ರಿಲಿಜನ್ನು ಎಲ್ಲಾ ಸಂಸ್ಕೃತಿಗಳಿಗೂ ಸಾಮಾನ್ಯವಾದ ಸಂಗತಿ ಎಂಬ ಧೋರಣೆಯ ಉಗಮ,ಮತ್ತು ವಿಕಾಸ ಹೇಗಾಯಿತು? ಪ್ರಪಂಚದ ತುಂಬೆಲ್ಲಾ ಹಿಂದೂಯಿಸಂ, ಶಿಂಟೋಯಿಸಂ ಇತ್ಯಾದಿ ರಿಲಿಜನ್ ಗಳು ಹೇಗೆ ಸೃಷ್ಟಿಯಾದವು ಎಂಬುದರ ಐತಿಹಾಸಿಕ ಅವಲೋಕನವಾಗಿದೆ.
೫,೬,೭ನೇ ಅಧ್ಯಾಯಗಳು ರಿಲಿಜನ್ನಿನ ಕುರಿತ ಆಧುನಿಕ ಸಿದ್ಧಾಂತಗಳು ಥಿಯಾಲಜಿಗಳನ್ನು ತಿರಸ್ಕರಿಸಿ ವೈಜ್ಞಾನಿಕ ವಿಧಾನದಲ್ಲಿ ರಿಲಿಜನ್ನಿನ ಅಧ್ಯಯನವನ್ನು ನಡೆಸುತ್ತಿವೆಯೆಂಬುದಾಗಿ ಹೇಳಿಕೆಯಿದ್ದರೂ ಕೂಡ ಅವು ಮೂಲತಃ ಥಿಯಾಲಜಿಯದೇ ಸೆಕ್ಯೂಲರ್ ರೂಪಗಳು ಎಂಬುದನ್ನು ನಿರ್ದೇಶಿಸುತ್ತದೆ.
೮,೯, ೧೦ನೇ ಅಧ್ಯಾಯಗಳಲ್ಲಿ ಲೇಖಕರು ರಿಲಿಜನ್ನಿನ ಕುರಿತು ಸಿದ್ಧಾಂತವನ್ನು ಕಟ್ಟುವ ಪ್ರಯತ್ನಕ್ಕೆ, ತೊಡಗುತ್ತಾರೆ.
೧೧ ಮತ್ತು ೧೨ನೇ ಅಧ್ಯಾಯಗಳಲ್ಲಿ ರಿಲಿಜನ್ ಇಲ್ಲದ ಸಂಸ್ಕೃತಿಗಳಿಗೂ ಅದು ಇರುವ ಸಂಸ್ಕೃತಿಗಳಿಗೂ ನಡುವೆ ತುಲನಾತ್ಮಕ ಅಧ್ಯಯನವನ್ನು ನಡೆಸಬಹುದಾದ ಸಾಧ್ಯತೆಯನ್ನು ಶೋಧಿಸುತ್ತಾರೆ.

ಪುಸ್ತಕದ ಮುಖಪುಟದ ಆಯ್ಕೆಯನ್ನು ಎಷ್ಟು ಎಚ್ಚರಿಕೆಯಿಂದ ಆಯ್ಕೆ ಮಾಡಿಕೊಂಡಿದ್ದಾರೆ ಅಂದರೆ ಪುಸ್ತಕದ ಹೂರಣವನ್ನು ಚಿತ್ರವೇ ಹಿಡಿದಿಟ್ಟುಕೊಂಡಿರುವಂತಿದೆ.ಇದು ಮೂಲತ ನರಸಿಂಹನ ಚಿತ್ರ.ಲುಡುವಿಕೋ ವಾರ್ಥೆಮಾ ಎಂಬ ಇಟಲಿ ಪ್ರವಾಸಿ ೧೫೦೫ರಲ್ಲಿ ಕ್ಯಾಲಿಕಟಿನ ರಾಜನನ್ನು ಭೇಟಿ ಮಾಡಿದಾಗ ಆತನು ಪೂಜಿಸುತ್ತಿದ್ದ ನರಸಿಂಹನನ್ನು ಕಂಡು ತಾನು ಅರ್ಥೈಸಿಕೊಂಡಿದ್ದನ್ನು ತನ್ನ ಪ್ರವಾಸಿ ಕಥನದಲ್ಲಿ ವಿವರಿಸಿದ್ದನು. ಅದನ್ನು ಓದಿ ಜರ್ಮನ್ ಚಿತ್ರಕಾರನೊಬ್ಬನು ಚಿತ್ರಿಸಿದ ಚಿತ್ರವಿದು. ೧೬ನೇ ಶತಮಾನದಲ್ಲಿ ಐರೋಪ್ಯರು ಮೊಟ್ಟ ಮೊದಲ ಬಾರಿಗೆ ಭಾರತೀಯ ಸಂಸ್ಕೃತಿಯನ್ನು ಸಂಧಿಸಿದಾಗ ಅವರು ಪ್ರೊಟೆಸ್ಟಾಂಟ್ ಕ್ರಿಶ್ಚಿಯಾನಿಟಿಯ ಕಣ್ಣಿಂದ ಎಲ್ಲಿನ ಆಚರಣೆಗಳನ್ನು ವೀಕ್ಷಿಸಿದರು.ಅವರಿಗೆ ಭಾರತೀಯ ಮೂರ್ತಿ ಪೂಜೆಯು ಪ್ರಾಚೀನ ಪೇಗನ್ನರ ಮೂರ್ತಿ ಪೂಜೆಯಂತೆ ಪಾಪವಾಗಿ ಹಾಗೂ ದೋಷಪೂರ್ಣವಾಗಿ ಕಂಡಿತಲ್ಲದೆ, ಅದು ಡೆವಿಲ್ಲನ ಪೂಜೆ ಎಂಬುದಾಗಿ ಭಾವಿಸಿದರು. ಆ ಮೂರ್ತಿಯ ಕೀರಿಟವನ್ನು ಕ್ಯಾಥೋಲಿಕ್ ಪೋಪನ ಕಿರೀಟಕ್ಕೆ ಹೋಲಿಸುವುದೂ ಗಮನಾರ್ಹ.

ಈ ವಿದ್ವತ್ಪೂರ್ಣ ಕೃತಿಯನ್ನು ಕುವೆಂಪು ವಿಶ್ವವಿದ್ಯಾನಿಲಯದ ’ಸ್ಥಳಿಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ’ದ ನಿರ್ದೇಶಕರಾಗಿರುವ ರಾಜರಾಮ ಹೆಗಡೆ ಕನ್ನಡಕ್ಕೆ ಅನುವಾದಿಸಿದ್ದಾರೆ. ಹೆಗ್ಗೋಡಿನ ಅಕ್ಷರ

VISITORS

00000726

ಪಬ್ ದಾಳಿಗೆ ಇವರೇ ಹೊಣೆಗಾರರು

ಮಕ್ಕಳನ್ನು ಹದ್ದುಬಸ್ತಿನಲ್ಲಿಡದ ಪೋಷಕರು
ಗೊಂದಲದ ಗೂಡಗುತ್ತಿರುವ ಯುವಜನತೆ
ಕೇಸರಿಕರಣಗೊಳ್ಳುತ್ತಿರುವ ಕರಾವಳಿ ಪೋಲಿಸರು
ಗೃಹ ಸಚಿವರು

Votes so far: 0
Poll closed

INTERESTING PHOTOS OF THE DAY

**ಅವಧಿ**
ಜಯಶ್ರೀ ಕಾಲಂ: ಸರಳ ಚಂದ ಧಾರವಾಹಿ...
- @@@ ಸುವರ್ಣ ವಾಹಿನಿಯಲ್ಲಿ ಲಕುಮಿ ಅಪ್ಪಟ ಗ್ರಾಮೀಣ ಸೊಗಡಿನ ಧಾರವಾಹಿ.ತಾಜಾ ಪ್ರತಿಭೆಗಳು ಕಾಣುತ್ತೆ. ಲಕುಮಿ ಪಾತ್ರಧಾರಿ ಹುಡುಗಿಯ ಮುಗ್ಧ ರೂಪ ಮನ ಸೆಳೆಯುತ್ತದೆ. ವಾಸ್ತವ ಚಿತ್ರಣ ಇರುವ ಈ ...
*3 hours ago*

**ಸಂಪದ - 'ಹೊಸ ಚಿಗುರು, ಹಳೆ ಬೇರು'**
ಹೊಸ ಬಾಳಿಗೆ ನೀ ಜೊತೆಯಾದೆ; ಹೊಸ ಆನಂದ ನೀನಿಂದು ತಂದೆ...... -
*"ಹೃದಯದೊಡತಿ'ಗೆ,* *ಹೃದಯವೆ ಬಯಸಿದೆ ನಿನ್ನನೇ** .. **ತೆರೆಯುತ ಕನಸಿನ ಕಣ್ಣನೇ**..* *ದಿನವಿಡೀ ನಿನ್ನಯಾ** **ನೆನಪನೇ ನೇಯುವೇ**..* *ಸೆಳೆತಕೇ ಸೋಲುತಾ **ನಾ** ..**ಸನಿಹಕೇ ಕಾಯು...
*4 hours ago*

**ಕೆಂಡಸಂಪಿಗೆ**
ಜೋಯಪ್ಪ ಮಾಸ್ತರ ಶಾಲಾ ಸರಣಿ: ಗೂಬೆ ಹಿಡಿದ ಹುಡುಗ, ಬೆಕ್ಕು ತಂದ ಹುಡುಗಿ -
ಮಕ್ಕಳು ಯಾವತ್ತೂ ಕುತೂಹಲಿಗಳೇ. ಸಾಹಸ ಪ್ರಿಯರಂತೂ ಹೌದೇ ಹೌದು. ಜೇನು ಕೀಳಬಲ್ಲರು, ರಜೆಯಲ್ಲಿ ಹಿ
*7 hours ago*

**ವಿಕಾಸವಾದ**
" ಆ ಮತ್ತೊಂದು ಬಾಗಿಲು " - "ಸ್ವಲ್ಪ ಹೊತ್ತು, ಇನ್ನೇನು ಚಿಕ್ಕಮ್ಮ ಬಂದೇ ಬಿಡ್ತಾರೆ" ಅಂದಳು ಆ ಹುಡುಗಿ. ಆಕೆ ಸುಮಾರು ಹದಿನೈದು ಹದಿನಾರು ವರ್ಷದವಳಂತೆ ಕಂಡಳು. ನಟ್ಟೆಲ್ ಸುಮ್ಮನೇ ಕೂತ. "ಅಲ್ಲಿವರೆಗೆ ನಾವಿಬ್ರೂ ಮಾತ...
*23 hours ago*

**ನೆನಪಿನ ಪುಟಗಳು**
ಕ್ಷಮೆಯಿರಲಿ... - ಗೆಳೆಯ, ನೆನಪಿನ ಪುಟದಲಿ ಜೊತೆಯಾದ ನೀನು, ನೋವು ನಲಿವಿನಲ್ಲಿ ಬಾಗಿಯಾದೆ, ನಿನ್ನ ಸ್ನೇಹಕ್ಕೆ ನಾ ಎಷ್ಟು ಹುಚ್ಚಿಯಾಗಿರುವೆಯೆಂದರೆ, ನಿನ್ನ ನೆನಪಿಸದ

ಪ್ರಕಾಶನದಿಂದ ಪ್ರಕಟವಾಗಿದೆ. ಬೆಲೆ ರೂ ೪೧೫

POSTED BY SURAGI/USHAKATTEMANE AT 8:05 PM

---

## 1 COMMENTS:

sunaath said...

ಸುರಗಿ,
ಒಂದು ಅಪೂರ್ವ ಸಂಶೋಧನ ಕೃತಿಯ ಪರಿಚಯ ಮಾಡಿಕೊಟ್ಟದ್ದಕ್ಕಾಗಿ ಧನ್ಯವಾದಗಳು. ಕೃತಿಯ ತಿರುಳನ್ನು ಓದುತ್ತಿದ್ದಂತೆ, ತುಂಬ ಆಸಕ್ತಿ ಮೂಡಿತು.

AUGUST 28, 2010 4:15 AM

Post a Comment

Home Older Post

Subscribe to: Post Comments (Atom)

5 days ago

**ಸಲ್ಲಾಪ**
ಹೇ ರಾಮ್! - *‘ದೇಶ ಶ್ರೀಮಂತವಾಗಿರುವಾಗ ಓರ್ವ ವ್ಯಕ್ತಿ ಬಡತನದಲ್ಲಿದ್ದರೆ ಅವನು ತಪ್ಪುಗಾರ; ದೇಶ ಬಡತನದಲ್ಲಿದ್ದಾಗ ಓರ್ವ ವ್ಯಕ್ತಿ ಸಿರಿವಂತಿಕೆಯಲ್ಲಿದ್ದರೆ ಆ ವ್ಯಕ್ತಿ ಒಬ್ಬ ಪಾಪಿ’* ಎಂದು ಚೀನಾ ದೇಶ...
*1 week ago*

**TuLu Studies**
250. From ‘OLA SAVARI’ to ‘VARASARI’ - A decorated Bhoota (Spirit) with attendants, [Courtesy: :www.Mangalore.com] Words, in any language, are outcome of an idea, experience (mental and physic...
*1 week ago*

**BILIMALE**
A journey of eternal return by HS Shivaprakash - Ki. Ram. Nagaraj, the distinguished Kannada scholar, is no more. However, not even death can silence the voice of this extraordinary human being who held s...
*2 weeks ago*

**ಮೌನಿ.....**
“ಅನ್ನ”ದ “ಸ್ವಾತಂತ್ರ್ಯ”ಕ್ಕಾಗಿ ಹೋರಾಟ . . .!! - ಮೊನ್ನೆ ಒಬ್ರು ಕೇಳಿದ್ರು.ಒಬ್ಬ ಮನುಷ್ಯನಿಗೆ ದಿನಕ್ಕೆ ಎಷ್ಟು ಕೇಜಿ ಅಕ್ಕಿ ಬೇಕು ಅಂತ. .?. ಏ. . .!!, ಅದೇನು ಒಂದರ್ಧ ಕೇಜಿ ದಿನಕ್ಕೆ, ಅಂತ ನಾವು ಅಂದಾಜು ಲೆಕ್ಕ ಬಿಟ್ಟೆವು.ಆದ್ರೆ ಅವ್ರ...
*2 weeks ago*

**ಬೊಗಳೆ - ರಗಳೆ**
ಸಗಣಿಗಾರಿಕೆ ಅಕ್ರಮಗೊಳಿಸಲು ಆಗ್ರಹ - (ಬೊಗಳೂರು ರದ್ದಿ ಸಹೋದರರ ಬ್ಯುರೋದಿಂದ) ಬೊಗಳೂರು, ಜು. 02- ಬಳ್ಳಾರಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಕಳೆದ ಅರುವತ್ತು ವರ್ಷಗಳಿಂದ ತೀವ್ರವಾಗಿ ಭೂಮಿ ಕೊರೆದು ಕೊರೆದು ದುಡ್ಡು ಮಾಡಿಕೊಂಡವರೆಲ...
*4 weeks ago*

**ಬಾನಾಡಿ**
Wishes ... - A Government Department Spending Money on a Private Media Is itn't wasting tax payers money? (BND)
*4 weeks ago*

**ಕಡಲ ತೀರ**
ಕೈ (ಹಣೆ) ಬರಹ ... - ಮಕ್ಕಳ ಕೈ ಬರಹ ಸುಂದರವಾಗಲೆಂದು ದಿನಾ ಒಂದು ಪುಟ ಕಾಪಿ ಬರೆಯಲು ಕನ್ನಡ ಟೀಚರು ಹೇಳಿದ್ದರು. ಗುಂಡು ಗುಂಡಗೆ ಬರೆದ ಸುರೇಶನಿಗೆ ಟೀಚರು ಹತ್ತರಲ್ಲಿ ಹತ್ತು ಅಂಕ ನೀಡೋದಲ್ಲದೆ ಲ್ಯಾಕ್ಟೋ ಕಿಂಗ್...
*2 months ago*

**Pakashale**
Dinner Rolls / Pav Buns - *INGREDIENTS:* 3 cups Bread flour 1packet active dry yeast 1/2 cup warm water 1 tsp Sugar 1 tsp salt 1 cup warm milk 2 tblsp melted butter 2 cloves ...
*4 months ago*

**ಅನಿವಾಸಿ**
ಬೆಂಗಳೂರು – ಹುಡುಗಿ - ಹೋದ ಸಲ ನಿನ್ನನ್ನು ಭೇಟಿಯಾದಾಗ ನಾವು ಹೇಗಿದ್ದೆವು? ಎಲ್ಲಾ ಹೇಗಿತ್ತು? ಮರೆತೇ ಹೋಗಿದೆ. ಅಂತಹ ದಿನಗಳಿವು. ದೂರದಿಂದಲೇ ಮಾತಾಡುತ್ತಿದ್ದೆವು. ಆದರೂ ಮುಖಾಮುಖಿಯಾಗುವ ಚಂದವೇ ಬೇರೆ ತಾನೆ? ಇದ...
*5 months ago*

**ನನ್ನದಲ್ಲದ ಕವಿತೆ**
ಹೆಸರಿಟ್ಟದಿನ - ವರವರರಾವು(ತೆಲುಗು) ೧ಹೇಳಹೆಸರಿಲ್ಲದವರಕ್ರಾಂತಿವೀರರನಾಗಿಸಿದ ರೆಸುಮ್ಮನಿರುವುದೇ ದೇಶವೀರರಿಗೊಂದು ಚರಿತ್ರೆ ಬೇಕುಕಾಡುಮಾನವರೆಲ್ಲ ಸೇರಿಲಾಠಿ ಕಲ್ಲು ಸುಣ್ಣ ಸಿಮೆಂಟು ಕಲಸಿಕಟ್ಟಿದಾಕ್ಷಣಕ್ಕೆ ಅದು...
*7 months ago*

**raitapy**
ಬಿಟಿ ನಿಷೇಧ- ಫಾಲೋ ಅಪ್ - ಸುದ್ದಿ ಕನ್ನಡಪ್ರಭದಲ್ಲಿ -
*7 months ago*